ಇದೆ ಮತ್ತು ಇಲ್ಲ. ಪ್ಯಾರಿಸ್‌ನಲ್ಲಿ 'The Labyrinth of Solitude' ಬರೆದೆ. ಲಾಸ್ ಏಂಜಲೀಸ್‌ನಲ್ಲಿನ ಮೆಕ್ಸಿಕನ್ನರನ್ನು ಪಚುಕೋಸ್ ಅಥವಾ ಚಿಕಾನೋಸ್ ಎಂದು ಕರೆಯುತ್ತಾರೆ. ಅವರ ಸ್ಥಿತಿಯನ್ನು ವಿಶ್ಲೇಷಿಸುತ್ತಿದ್ದಾಗ ಇದರ ಐಡಿಯಾ ಅಮೆರಿಕದಲ್ಲಿದ್ದಾಗ ಹೊಳೆಯಿತು. ಅವರ ಸ್ಥಿತಿ ನನಗೆ ಕನ್ನಡಿ ಹಿಡಿದಂತೆ ಅನ್ನಿಸಿತು. ಅದು ನೀವು ಹೇಳುತ್ತಿರುವ ಆತ್ಮಕಥನಾತ್ಮಕ ಆಯಾಮ. ಮೆಕ್ಸಿಕೊ ಮತ್ತು ಅಮೆರಿಕದ ನಡುವೆ ಸಂಬಂಧವಿದೆ. ಅಮೆರಿಕ ಮತ್ತು ಮೆಕ್ಸಿಕೊ ಭಿನ್ನವಾದ ದೇಶಗಳಾದರೂ ಅವು ಒಟ್ಟಿಗೆ ಬದುಕಬೇಕೆನ್ನುವುದು ಶಿಕ್ಷೆ. ಹಾಗಾಗಿ, ನಾವು ಪರಸ್ಪರರನ್ನು ಅರ್ಥಮಾಡಿಕೊಳ್ಳುವುದರ ಜೊತೆಗೆ ನಮ್ಮನ್ನು ನಾವು ತಿಳಿದುಕೊಳ್ಳಬೇಕು. ಹೀಗೆ 'The Labyrinth of Solitude' ಹುಟ್ಟಿಕೊಂಡಿತು.

**◆ ಈ ಪುಸ್ತಕ ಭಿನ್ನತೆ, ಅಸಮಾಧಾನ, ಮೆಕ್ಸಿಕನ್ ವ್ಯಕ್ತಿಯ ಹರ್ಮೆಟಿಕ್ ಸ್ವಭಾವದಂತಹ ಐಡಿಯಾಗಳ ಕುರಿತು ಮಾತಾಡುತ್ತದೆ. ಆದರೆ, ಕವಿಯ ಬದುಕಿನ ಕುರಿತು ಹೇಳುವುದಿಲ್ಲ.**

ನಿಜ. ಆ ವಸ್ತುವನ್ನು 'Poetry of Solitude and Poetry of Communion' ಎನ್ನುವ ಪುಟ್ಟ ಪ್ರಬಂಧದಲ್ಲಿ ಹಿಡಿದಿಡಲು ಯತ್ನಿಸಿದೆ. ಅದು 'The Labyrinth of Solitude'ಗೆ ಸಮಾನವಾಗಿತ್ತು. ಅದರಲ್ಲಿ ಮನುಷ್ಯನ ಕುರಿತಾದ ನನ್ನ ದೃಷ್ಟಿಕೋನವನ್ನು ಪ್ರಸ್ತುತಪಡಿಸಿದ್ದೆ. ಪ್ರತಿ ಮನುಷ್ಯನ ಜೀವನದಲ್ಲಿ ಎರಡು ಸಂದರ್ಭಗಳಿರುತ್ತವೆ. ಮೊದಲನೆಯದು ಒಂಟಿತನ. ನಾವು ಹುಟ್ಟಿದಾಗ ಅದನ್ನು ಅನುಭವಿಸುತ್ತೇವೆ. ಅನಂತರ ಅದಕ್ಕೆ ವಿರುದ್ಧವಾಗಿ ಸಂಬಂಧಗಳ ಬಾಂಧವ್ಯವನ್ನು ಕಟ್ಟಿಕೊಳ್ಳುತ್ತೇವೆ. ಎರಡನೆಯದು ಹೈಡೆಗರ್ ಹೇಳುವಂತೆ, ನಮ್ಮನ್ನು ಈ ಜಗತ್ತಿನೊಳಗೆ ಎಸೆಯಲಾಗುತ್ತದೆ. ನಾವೆಲ್ಲರೂ ಬೌದ್ಧರು ಹೇಳುವಂತೆ, 'ಮತ್ತೊಂದು ಅರ್ಧವನ್ನು' ಕಂಡುಕೊಳ್ಳಬೇಕು. ಅದೇ ಸಮುದಾಯವನ್ನು ಕಟ್ಟಿಕೊಳ್ಳುವ ದಾಹವಾಗುತ್ತದೆ. ತತ್ವಶಾಸ್ತ್ರ ಮತ್ತು ಧರ್ಮ ಈ ಮೂಲಸ್ಥಿತಿ ಅಥವಾ ಸಂಕಟದಿಂದ ಹುಟ್ಟಿಕೊಂಡಿದೆ. ಕಾವ್ಯ ಎನ್ನುವುದು ಒಂಟಿತನ ಮತ್ತು ಸಮುದಾಯದ ನಡುವಿನ ಸೇತುವೆಯಿದ್ದಂತೆ.

**◆ ಈ ಕಾರಣಕ್ಕಾಗಿಯೇ ಅಧ್ಯಾತ್ಮದ ಭಾಷೆಯು ಶೃಂಗಾರಾತ್ಮಕವಾಗಿದೆಯೇ?**

ಹೌದು. ಒಂದಾಗುವಿಕೆ ಅಧ್ಯಾತ್ಮದ ಬಹುದೊಡ್ಡ ಪ್ರತಿಮೆ. ಪ್ರೇಮಿಗಳು ಈ ಬಗೆಯ ಪ್ರತಿಮೆ. ಆದರೆ, ಪ್ರೇಮಿಗಳ ನಡುವೆಯೂ ಒಂಟಿತನ ಇಡಿಯಾಗಿ ನಾಶವಾಗಿರುವುದಿಲ್ಲ. ಒಂಟಿತನ ಪರಿಪೂರ್ಣತೆಯೂ ಅಲ್ಲ. ನಾವು ಯಾವಾಗಲೂ ಮತ್ತೊಬ್ಬರೊಡನೆ ಇರುತ್ತೇವೆ. ಅದು ನಮ್ಮದೇ ನೆರಳು ಕೂಡ ಆಗಿರಬಹುದು. ನಾವು ಎಂದೂ ಒಂಟಿಯಲ್ಲ, ನಾವು ಯಾವಾಗಲೂ 'ನಾವು' ಆಗಿರುತ್ತೇವೆ. ಇದು ಮನುಷ್ಯ ಬದುಕಿನ ವೈರುಧ್ಯ.

**◆ ಒಟ್ಟಾರೆಯಾಗಿ ನೀವು ಎಂಟು ವರ್ಷ ಬೇರೆ ದೇಶಗಳಲ್ಲಿ ನೆಲೆಸಿದ್ದೀರಿ. ಮೊದಲು ಅಮೆರಿಕ ಆಮೇಲೆ ಪ್ಯಾರಿಸ್ ಅನಂತರ ಮೆಕ್ಸಿಕನ್ ರಾಜತಾಂತ್ರಿಕ ಸೇವೆಯಲ್ಲಿದ್ದೀರಿ. ಕವಿಯಾಗಿ ನಿಮ್ಮ ವೃತ್ತಿಜೀವನದ ದೃಷ್ಟಿಯಿಂದ ಈ ವರ್ಷಗಳನ್ನು ಹೇಗೆ ನೋಡುವಿರಿ?**

ಸರಿಯಾಗಿ ಹೇಳಬೇಕೆಂದರೆ ಒಂಬತ್ತು ವರ್ಷ ಬೇರೆ ಬೇರೆ ದೇಶಗಳಲ್ಲಿದ್ದೆ. ನೀವು ಆ ವರ್ಷಗಳನ್ನು ತಿಂಗಳುಗಳಾಗಿ ಎಣಿಸಿದರೆ ಒಂಬತ್ತು ತಿಂಗಳು. ಆ ನವಮಾಸ ಕಾಲದ ಗರ್ಭದೊಳಗಿದ್ದೆ. ಸ್ಯಾನ್ ಫ್ರಾನ್ಸಿಸ್ಕೊ, ನ್ಯೂಯಾರ್ಕ್ ಮತ್ತು ಪ್ಯಾರಿಸ್‌ನಲ್ಲಿದ್ದ ಅವಧಿ ಗರ್ಭಾವಸ್ಥೆಯ ಅವಧಿ. ಮತ್ತೆ ಹುಟ್ಟಿದ್ದೆ. 1952ರ ಕೊನೆಯಲ್ಲಿ ಮೆಕ್ಸಿಕೊಗೆ ಹಿಂತಿರುಗಿದಾಗ ನಾನು ಬೇರೆಯೇ ಕವಿ, ಲೇಖಕನಾಗಿದ್ದೆ. ಒಂದು